ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **31-01-2025**

ಮುಂದುವರೆದ ಪಾಟಿ ಸವಾಲುಃ ಶ್ರೀ. ಜೆ.ಕೆ ವಕೀಲರಿಂದ

ನನಗೆ ನೀಡಿರುವ ಸಾಮಾನ್ಯ ಅಧಿಕಾರ ಪತ್ರವನ್ನು ಜಿ.ಜೆ.ಗಿರೀಶ್ ವಕೀಲರ ಕಚೇರಿಯಲ್ಲಿ ತಯಾರು ಮಾಡಲಾಗಿರುತ್ತದೆ. ಸದರಿ ಸಾಮಾನ್ಯ ಅಧಿಕಾರ ಪತ್ರ ತಯಾರಿಸಲು ಫಿರ್ಯಾದಿ ಮಾಹಿತಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಹಾಜರಿದ್ದೆ. ನನ್ನ ಹೆಸರು ಮತ್ತು ವಿಳಾಸವನ್ನು ನಾನೇ ತಿಳಿಸಿರುತ್ತೇನೆ. ಈ ಪ್ರಕರಣ ಹೊರತುಪಡಿಸಿ ಫಿರ್ಯಾದಿಯಿಂದ ಅಧಿಕಾರ ಪತ್ರ ಪಡೆದು ಎಷ್ಟು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದು ನೆನಪಿಲ್ಲ. ಆ ಎಲ್ಲಾ ಪ್ರಕರಗಳಲ್ಲೂ ನನಗೆ ಮಾಹಿತಿ ಇತ್ತು. ಸಿಸಿ ನಂ.**395/2022** ಗಿರೀಶ್ ಮತ್ತು ನಿಜಗುಣ ರವರ ಪ್ರಕರಣದಲ್ಲಿ ನಾನು ಫಿರ್ಯಾದಿಯಿಂದ ಅಧಿಕಾರ ಪತ್ರ ಪಡೆದು ಸಾಕ್ಷಿ ನುಡಿದಿರುತ್ತೇನೆ. ಆ ಪ್ರಕರಣದಲ್ಲಿ ನನ್ನ ಪಾಟಿ ಸವಾಲು ಆಗುವ ಸಮಯದಲ್ಲಿ ಆ ಪ್ರಕರಣ ಹೊರುತುಪಡಿಸಿ ಬೇರೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿರುತ್ತೇನೆ ಎಂದರೆ ಈಗ ನನಗೆ ನೆನಪಿಲ್ಲ. ಆ ಪ್ರಕರಣದಲ್ಲಿ ಹೇಳಿರುವಂತೆ ನನಗೆ ಈ ಪ್ರಕರಣದ ಬಗ್ಗೆ ವ್ಯವಹಾರದ ಜ್ಞಾನ ಇಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದ ದಾಖಲಿಸುವ ಮುಂಚೆ ಫಿರ್ಯಾದಿ ಆರೋಪಿಗೆ ತಿಳುವಳಿಕೆ ನೀಡಿದ್ದರು ಅದಕ್ಕೆ ಮಾಹಿತಿಯನ್ನು ಫಿರ್ಯಾದಿ ನೀಡಿರುತ್ತಾರೆ. ಮಾಹಿತಿ ಕೊಡುವಾಗ ನಾನು ಜೊತೆಯಲ್ಲಿದ್ದೆ. ಆಗ ನಾನು ಇಲ್ಲದಿದ್ದರೂ ಇದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದನ್ನು ದಾಖಲು ಮಾಡಲು ವಕೀಲರಿಗೆ ಮಾಹಿತಿಯನ್ನು ಫಿರ್ಯಾದಿ ಮಾಹಿತಿ ನೀಡಿರುತ್ತಾರೆ. ನಾನು ಅದಕ್ಕೆ ಮಾಹಿತಿ ಕೊಟ್ಟಿಲ್ಲ. ಆದ್ದರಿಂದ ಫಿರ್ಯಾದಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಗೆ ನಾನು ಮಾಹಿತಿ ನೀಡದೇ ಇರುವುದರಿಂದ ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲದೇ ಇರುವುದರಿಂದ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಸಮರ್ಥನಲ್ಲ ಎಂದರೆ

ಸರಿಯಲ್ಲ. ಆರೋಪಿ ಜಯರಾಂ ರವರಿಂದ **2020** ರಲ್ಲಿ ಪಡೆದ ಹಣಕ್ಕೆ ಬಡ್ಡಿ ಕೇಳಿಲ್ಲ. ನಾವು ಯಾರಿಗೂ ಬಡ್ಡಿಗೆ ಹಣ ಕೊಡುವುದಿಲ್ಲ. ಗಿರೀಶ್ ಮತ್ತು ನಿಜಗುಣ ರವರ ಪ್ರಕರಣದಲ್ಲಿ ಶೇಕಡ **16** ರಷ್ಟು ಬಡ್ಡಿಯನ್ನು ಸಾಲದ ಹಣಕ್ಕೆ ಪಡೆಯುತ್ತೇವೆ ಎಂದು ತಿಳಿಸಿರುತ್ತೇನೆ ಎಂದರೆ ಫೈನಾನ್ಸ್ ವ್ಯವಹಾರಕ್ಕೆ ಮಾತ್ರ ಬಡ್ಡಿ ಹಾಕುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಬಾಲಾಜಿ ಫೈನಾನ್ಸ್ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ. **2022** ರಲ್ಲಿ ಹಲವಾರು ಜನರಿಗೆ ಸಾಲ ಕೊಟ್ಟು ಈ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲು ಮಾಡಿರುತ್ತೇವೆ. ಜಯರಾಂ ರವರು ಪಾವತಿ ಮಾಡಿರುವ ಆದಾಯ ತೆರಿಗೆಯಲ್ಲಿ ಸಾಲದ ಬಾಕಿ ಹಣ ಬರಬೇಕೆಂದು ನಮೂದು ಮಾಡಿಲ್ಲ. ಜಯರಾಂ ರವರು ಸಲ್ಲಿಸಿರುವ ಆದಾಯ ತೆರಿಗೆಯಲ್ಲಿ ಆ ವಿಚಾರಗಳು ನಮೂದು ಮಾಡದೇ ಇರುವುದರಿಂದ ಈ ಪ್ರಕರಣದ **6** ಲಕ್ಷದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಜಯರಾಂ ಕೊಟ್ಟಿದ್ದ ನೋಟಿಸಿಗೆ ಆರೋಪಿ ಉತ್ತರ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ, ಉತ್ತರದಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಉತ್ತರದ ನೋಟಿಸಿನಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ನೀಡಿದ್ದ ಉತ್ತರಕ್ಕೆ ಮರು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ ಗೂ **6** ಲಕ್ಷ ಹಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಹಣ ಪಡೆಯಲು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ**).**

Sd/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**